**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಯತೀಂದ್ರ ಎಸ್ ಇವರು ನಿಯಮ 72 ರಡಿ ಗಮನ ಸೆಳೆದಿರುವ ಸೂಚನೆಗೆ ಉತ್ತರ**

**ವಿಷಯ**: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ದಿನಾಂಕ: 07.02.2019 ರಿಂದ ಹಿಂದೆ 2 ಹೆಕ್ಟೇರ್ ಗಿಂತ ಕಡಿಮೆ ಭೂ ಒಡೆತನ ಹೊಂದಿರುವ ರೈತರಿಗೆ ಪ್ರತಿ ರೈತ ಕುಟುಂಬಕ್ಕೆ ಒಂದು ವರ್ಷಕ್ಕೆ ರೂ. 6000.00 ಗಳನ್ನು ಪ್ರತಿ 4 ತಿಂಗಳಿಗೊಮ್ಮೆ ರೂ. 2000.00 ರಂತೆ 3 ಸಮಾನ ಕಂತುಗಳಲ್ಲಿ ದಿನಾಂಕ 01.02.2018 ರಿಂದ ಜಾರಿಗೆ ಬರುವಂತೆ ನೀಡಲಾಗುತ್ತಿದೆ. ಫಲಾನುಭವಿ ರೈತರು ಮೃತ ಪಟ್ಟಲ್ಲಿ ಅವರ ವಾರಸುದಾರರಿಗೆ ಈ ಯೋಜನೆಯನ್ನು ವಿಸ್ತರಿಸಲು ಮಾತ್ರ ಅವಕಾಶವಿರುತ್ತದೆ.

ಆದರೆ, ರೈತರು 7-2-2019 ನಂತರ ಖರೀದಿ ಮಾಡಿದ ಜಮೀನುಗಳಿಗೆ ಈ ಯೋಜನೆಯನ್ನು ವಿಸ್ತರಿಸದ ಕಾರಣ ಜಮೀನು ಖರೀದಿ ಮಾಡಿ ಭೂ ಒಡೆತನ ಹೊಂದಿರುವ ರೈತರಿಗೆ ಈ ಯೋಜನೆಯ ಮೊತ್ತ ಬರುತ್ತಿಲ್ಲ. ಇದರಿಂದ ಲಕ್ಷಾಂತರ ರೈತರಿಗೆ ಅನ್ಯಾಯವಾಗುತ್ತಿದೆ. ಕಳೆದ 4 ವರ್ಷಗಳಿಂದ ರೈತರಿಗೆ ಅನ್ಯಾಯವಾಗುತ್ತಿರುವ ಕುರಿತು ಮಾನ್ಯ ಕೃಷಿ ಸಚಿವರ ಗಮನ ಸೆಳೆದಿರುವ ಬಗ್ಗೆ.

**ಉತ್ತರ:** ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ದಿನಾಂಕ:01.12.2018 ರಿಂದ ಅನ್ವಯ ವಾಗುವಂತೆ ಫೆಬ್ರುವರಿ 2019 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸಾಗುವಳಿ ಭೂಮಿ (ಹಿಡುವಳಿ ಮಿತಿಯಿರುವುದಿಲ್ಲ) ಹೊಂದಿರುವ (01.02.2019 ರಳೊಳಗಾಗಿ ಸ್ವಾಧೀನದಲ್ಲಿರುವ / ಭೂದಾಖಲೆಯಲ್ಲಿ ಹೆಸರಿರುವ) ಎಲ್ಲಾ ಅರ್ಹ ರೈತ ಕುಟುಂಬಕ್ಕೆ (ಒಂದು ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳು), ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ ಆದಾಯಗಳಿಸಲು ನೆರವಾಗಲು ವಾರ್ಷಿಕ ರೂ.6000/-ಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಸದರಿ ಅನುದಾನವನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು.

ಈ ಯೋಜನೆಯ ಮಾರ್ಗಸೂಚಿಯ ಪರಿಚ್ಛೇಧ 5.3.3 ರ ಅನ್ವಯ 01.02.2019 ರ ನಂತರ ಪೌತಿ ಖಾತೆ (inheritance) ಮೂಲಕ ಭೂಮಾಲೀಕತ್ವ ಹೊಂದಿರುವ ಅರ್ಜಿದಾರರನ್ನು ಹೊರತುಪಡಿಸಿ ಬೇರೆ ಕಾರಣಗಳಾದ ಖರೀದಿ, ದಾನ, ವಿಭಜನೆ ಮೂಲಕ ಭೂ ಒಡೆತನ ಗಳಿಸಿದ ರೈತರು ಅರ್ಹರಾಗುವುದಿಲ್ಲ.

ಅಲ್ಲದೆ, ಪಿ.ಎಂ.ಕಿಸಾನ್ ಮಾರ್ಗಸೂಚಿಗಳನ್ವಯ ಈ ಕೆಳಕಂಡ ರೈತರು ಯೋಜನೆಯ ಫಲಾನುಭವಿಗಳಾಗಲು ಅನರ್ಹರಾಗಿರುತ್ತಾರೆ.

- ಭೂಮಿ ಹೊಂದಿರುವ ಸಂಘ ಅಥವಾ ಸಂಸ್ಥೆಗಳು.
- ಮಾಜಿ ಮತ್ತು ಹಾಲಿ ಸಾಂವಿಧಾನಿಕ ಹುದ್ದೆಗಳನ್ನು ಹೊಂದಿರುವುದು.

- ಕುಟುಂಬ ಸದಸ್ಯರು ನಿವೃತ್ತ / ಹಾಲಿ ಸೇವೆಯಲ್ಲಿರುವ ಕೇಂದ್ರ / ರಾಜ್ಯ ಸರ್ಕಾರಗಳ / ಸಚಿವಾಲಯ ಕಛೇರಿ/ ಇಲಾಖೆ, ಕ್ಷೇತ್ರ ಕಛೇರಿಗಳು/ ಕೇಂದ್ರ / ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಅಂಗ ಸಂಸ್ಥೆಗಳು / ಸ್ವಾಯತ್ತ ಸಂಸ್ಥೆಗಳು ಅಧಿಕಾರಿಗಳು ಹಾಗೂ ನೌಕರರು / ಸ್ಥಳೀಯ ಸಂಸ್ಥೆಗಳ ಖಾಯಂ ನೌಕರರು (ಗ್ರೂಪ್-ಡಿ / 4ನೇ ವರ್ಗ / Multi tasking staff ಹೊರತುಪಡಿಸಿ).

- ಕುಟುಂಬ ಸದಸ್ಯರು ಮಾಜಿ ಮತ್ತು ಹಾಲಿ ಸಚಿವರು / ಲೋಕಸಭಾ ಸದಸ್ಯರು/ ರಾಜ್ಯ ವಿಧಾನಸಭೆ / ವಿಧಾನ ಪರಿಷತ್ತಿನ ಸದಸ್ಯರು / ನಗರ ಸಭೆ ಅಧ್ಯಕ್ಷರು/ ಪುರಸಭೆ ಅಧ್ಯಕ್ಷರು /ಜಿಲ್ಲಾ ಪಂಚಾಯಿತಿ ಅಧ್ಯಕ್ಷರು.

- ಕಳೆದ ಐದು ವರ್ಷಗಳಲ್ಲಿ ಕುಟುಂಬ ಸದಸ್ಯರು ಕನಿಷ್ಠ ಎರಡು ವರ್ಷ ಸತತವಾಗಿ ಆದಾಯ ತೆರಿಗೆ ಪಾವತಿಯೊಂದಿಗೆ ಮೂರು ವರ್ಷಗಳು ಆದಾಯ ತೆರಿಗೆ ಪಾವತಿದಾರರಾಗಿದ್ದರೆ

- ವೈದ್ಯ, ಅಭಿಯಂತರ, ವಕೀಲ, ಲೆಕ್ಕಪರಿಶೋಧಕರು, ವಾಸ್ತುಶಿಲ್ಪದಂತಹ ವೃತ್ತಿಪರರು ಮತ್ತು ವೃತ್ತಿಪರ ಸಂಸ್ಥೆಯಲ್ಲಿ ನೋಂದಾಯಿಸಿ ಸದರಿ ವೃತ್ತಿಯನ್ನು ಕೈಗೊಳ್ಳುತ್ತಿರುವವರು.

ದಿನಾಂಕ:01.02.2019 ರ ನಂತರ ವಿಭಾಗ, ದಾನ, ಕ್ರಯ ರೀತಿಯಿಂದ ಭೂ ಮಾಲೀಕಕತ್ವ ಪಡೆದಿರುವ ರೈತರನ್ನು ಪಿ.ಎಂ.ಕಿಸಾನ್ ಯೋಜನೆಯಡಿ ಪರಿಗಣಿಸುವಂತೆ ಕೋರಿ ರೈತರಿಂದ ಮನವಿಗಳು ಸ್ವೀಕೃತವಾಗುತ್ತಿದ್ದು, ಸದರಿ ಮನವಿಗಳ ಬಗ್ಗೆ ಮುಂದಿನ ಕ್ರಮ ಕೋರಿ ಕೇಂದ್ರ ಸರ್ಕಾರದ ನಿರ್ಧಾರವನ್ನು ನಿರೀಕ್ಷಿಸಲಾಗಿದೆ.

*ಕೃ ಇ 152 ಎಎಂಎಸ್ 2025.*

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು.